ಈ) ಮತ್ತು ಉ) ರಾಜ್ಯದಲ್ಲಿ ವಿದ್ಯುತ್ ಕೊರತೆ ತೀವ್ರವಾಗಿರುತ್ತದೆ. ಲಭ್ಯವಿರುವ ವಿದ್ಯುತ್ತಿಗೆ ಅನುಗುಣವಾಗಿ ರೈತರ, ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯಾದಗಿರಿ ಜಿಲ್ಲೆಗೆ ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಜನವರಿ–2013ರ ತಿಂಗಳಿನಲ್ಲಿ ಹಿಂದೆ ಹಂಚಲಾಗಿದ್ದ 60 ಮೆ.ವ್ಯಾ.ಗೆ ಹೆಚ್ಚುವರಿಯಾಗಿ 40 ಮೆ.ವ್ಯಾ ಹಂಚಿಕೆಯಾಗಿರುತ್ತದೆ. ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಪ್ರತಿದಿನ 6 ತಾಸು 3 ಫೇಸ್ ಮತ್ತು 8 ತಾಸು ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಊ) ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕಡೆಚೂರಿನಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯು ಉದ್ದೇಶಿಸಿದ್ದು, ಸದರಿ ಉಪ ಕೇಂದ್ರದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಬಸ್ ಅಪಘಾತದಿಂದ ಮೃತರಾದ ಕುಟುಂಬಕ್ಕೆ ಪರಿಹಾರ ಸಾರಿಗೆ ಇಲಾಖೆ

60 : (192)

ಶ್ರಿ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಭಾಲ್ಕಿ ಬಸ್ ನಿಲ್ದಾಣದ ಹತ್ತಿರ ಇಲಾಖೆಯ ಸಿಬ್ಬಂದಿಯಿಂದ ಆದ ಅಚಾತುರ್ಯದಿಂದ 9ನೇ ತರಗತಿಯ ವಿಧ್ಯಾರ್ಥಿ ಮೃತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದುವರೆವಿಗೂ ಮೃತರ ಕುಟುಂಬಕ್ಕೆ ಪರಿಹಾರ ನೀಡದೆ ಇರಲು ಕಾರಣವೇನು;

ಇ) ಈಗಲಾದರೂ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್.ಅಶೋಕ್ (ಮಾನ್ಯ ಉಪ ಮುಖ್ಯಮಂತ್ರಿಗಳು (ಗೃಹ ಮತ್ತು ಸಾರಿಗೆ))

ಅ) ಬಂದಿದೆ.

ಆ ಮತ್ತು ಇ) ಮೃತಪಟ್ಟ ಬಾಲಕನ ಅವಲಂಬಿತರಿಗೆ ದಿನಾಂಕ 21.12.2012 ರಂದು ರೂ.17,000/– ಪರಿಹಾರ ಧನ ನೀಡಲಾಗಿರುತ್ತದೆ. ನಿಯಮಾನುಸಾರ ಮೃತಪಟ್ಟ ಅವಲಂಬಿತರಿಂದ ದಾಖಲೆಗಳನ್ನು ಪಡೆದು

ಸತ್ಯಾಸತ್ಯತೆಯನ್ನು ಪರಿಶೀಲಿಸಲು ಕಾಲಾವಕಾಶ ತೆಗೆದುಕೊಳ್ಳಲಾಗಿದ್ದು, ಸದರಿ ಪ್ರಕ್ರಿಯೆ ಸಹ ಮುಕ್ತಾಯಗೊಳಿಸಿ, ಮೃತರ ಅವಲಂಭಿತರಿಗೆ ಉಳಿದ ರೂ.33,000/–ಗಳ ಪರಿಹಾರ ಧನವನ್ನು ಚೆಕ್ ಸಂಖ್ಯೆ 506413 ಮೂಲಕ ನೀಡಲಾಗಿರುತ್ತದೆ. ಒಟ್ಟಾರೆ ಮೃತ ಬಾಲಕರ ಅವಲಂಭಿತರಿಗೆ ರೂ.50,000/– ಪರಿಹಾರ ಧನ ನೀಡಲಾಗಿರುತ್ತದೆ.

ಹೆಚ್ಚುವರಿ ವಿದ್ಯುತ್ ಪರಿವರ್ತಕಗಳನ್ನು ಒದಗಿಸುವುದು

114 : (79)

ಶ್ರೀ ಸುರೇಶ್ ಬಾಬು.ಸಿ.ಬಿ (ಚಿಕ್ಕನಾಯಕನಹಳ್ಳಿ)

ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೆಚ್ಚುವರಿ ಯಾಗಿ ಬೇಡಿಕೆ ಇರುವ 25 ಕೆ.ವಿ.ಎ, 63 ಕೆ.ವಿ.ಎ, 100 ಕೆ.ವಿ.ಎ ವಿದ್ಯುತ್ ಪರಿವರ್ತಕಗಳೆಷ್ಟು (ವಿವರ ಒದಗಿಸುವುದು);

ಆ) ಇದುವರೆಗೆ, ಹೆಚ್ಚುವರಿಯಾಗಿ ಬೇಡಿಕೆ ಇರುವ ಪರಿವರ್ತಕಗಳಿಗೆ ಎಷ್ಟೆಷ್ಟು ವಿದ್ಯುತ್ ಪರಿವರ್ತಕಗಳನ್ನು ಒದಗಿಸಲಾಗಿದೆ;

ಇ) ಉಳಿದವುಗಳನ್ನು ಇನ್ನೆಷ್ಟು ದಿನಗಳಲ್ಲಿ ಒದಗಿಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2012–13ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಬೇಡಿಕೆ ಇರುವ ವಿದ್ಯುತ್ ಪರಿವರ್ತಕಗಳ ವಿವರಗಳು ಕೆಳಕಂಡಂತಿವೆ:

ಕ್ರಮ ಸಂಖ್ಯೆ	ವಿದ್ಯುತ್ ಪರಿವರ್ತಕಗಳ ಸಾಮರ್ಥ್ಯ	ಸಂಖ್ಯೆ
1	25 ಕೆ.ವಿ.ಎ	88
2	63 ಕೆ.ವಿ.ಎ	66
3	100 ಕೆ.ವಿ.ಎ	6